ಧಾರಾವಾಹಿ–4

# ನಂಬಿಕೆಯ ನೂಲು

■ ಬಸು ಬೇವಿನಗಿಡದ
ಕಲೆ: ಎಚ್.ಎಸ್. ಮೋನಪ್ಪ

## ಮನೆಮಾತಾದ ‘ಮಾಯಕ್ಕನ ಸೀರೆ’

‘ಆಕಾಶದಡವ್ಯಾಗ ಧೂಪದ ಹೊಗೆಯೆದ್ದು, ಆಯ್ತು ಮಲ್ಲಯ್ಯನ ಶಿವಪೂಜಿ, ಆಕಾಶದ ಘಂಟೆ ಘಳಲೆಂದು.’ ಅವತ್ತೇ ಆಕೆ ಗುಡಿಯೆದುರು ಒಂದು ಗಿಡ ನೆಟ್ಟಳು. ‘ಅರಳಿಗಿಡ ನಮಗ ಬಾಳ ಪ್ರಾಣವಾಯು ಕೊಡ್ತದ. ನಾವು ಸುಮ್ಮಸುಮ್ಮನ ಎಲ್ಲಾ ಗಿಡಕಂಟಿ ಕಡಿದು ಊರು ನಾಶ ಮಾಡ್ತೇವಿ. ಊರು ಅಂದರೆ ಏನು? ಊರು ಅಂದರೆ ಹೊಳಿ ಹಳ್ಳ ಗಿಡಗಂಟಿಕಂಟಿ ತಪ್ಪಲುಹೊಲಮನಿ.’

ಊರ ಸಂಸ್ಕೃತಿಯೊಂದಿಗೆ ದೈವದ ಕುರುಹು ಬೆರೆತಿರುವ ಬಗೆ ಒಬ್ಬರಿಂದ ಹತ್ತು ಮಂದಿಗೆ, ಹತ್ತು ಮಂದಿಯಿಂದ ನೂರು ಮಂದಿಗೆ, ನೂರು ಮಂದಿಯಿಂದ ಸಾವಿರ ಮಂದಿಗೆ ಹೋಯಿತು. ಮಲ್ಲೂರಿನಲ್ಲಿ ನಡೆದ ಪರಿಸರ ದಿನಾಚರಣೆ ಮತ್ತು ಮಾಯಕ್ಕನ ಮಾತು ಪತ್ರಿಕೆಯಲ್ಲಿ ಬಂದವು.

